# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಂ.ಎಸ್.ಕುರ್ತಕೋಟಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಸವಣೂರು, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಮ್/8743/2016/ಸನಿಕಾಸ-1, ದಿನಾಂಕ: 19.12.2016

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಮ್/8743/2016/ಎಆರ್ಎಲ್ಓ-1, ದಿನಾಂಕ: 17.12.2016

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಸವಣೂರು ತಾಲ್ಲೂಕು ಪಂಚಾಯತ್ ವ್ಯಾಪ್ತಿಯ 2010-11ನೇ ಸಾಲಿನಿಂದ 2014-15ನೇ ಸಾಲಿನ ಬಸವ ವಸತಿ ಯೋಜನೆ ಅಡಿಯ ಫಲಾನುಭವಿಗಳಾದ 1) ಶ್ರೀ ಯಲ್ಲಪ್ಪ ಭೀಮಪ್ಪ ಕೋಟಿ, 2) ಶ್ರೀಮತಿ ಯಲ್ಲವ್ವ ಭೀಮಪ್ಪ ಕೋಟಿ, 3) ಶ್ರೀಮತಿ ಮಂಜವ್ವ ಭೀಮಣ್ಣ ಬೆಳವಗಿ, 4) ಶ್ರೀಮತಿ ರೇಣವ್ವ ಶೇಖಪ್ಪ ಭಜಂತ್ರಿ, ಮತ್ತು 5) ಶ್ರೀಮತಿ ರೇಣವ್ವ ನಾಗಪ್ಪ ಭಜಂತ್ರಿ ರವರಿಗೆ ಎದುರುದಾರರು ಎರಡೆರಡು ಬಾರಿ ಅನುದಾನವನ್ನು ಕೊಟ್ಟು ಕರ್ತವ್ಯ ಲೋಪ ಎಸಗಿದ್ದಾರೆಂದು, ಕಡಗೋಳ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ 1) ಶ್ರೀ ಶಿವಾನಂದ ಬಸವಣ್ಣೆಪ್ಪ ಕೋಳಿವಾಡ, 2) ಶ್ರೀ ಪಂಚಾಕ್ಷರಪ್ಪ ಬಸಲಿಂಗಪ್ಪ ಗುಜರಿ, 3) ಶ್ರೀ ಚನ್ನಪ್ಪ ಚನ್ನಬಸಪ್ಪ ದೇವಗಿರಿ, 4) ಶ್ರೀಮತಿ ಮಲ್ಲವ್ವ ಈರಣ್ಣ ಹಸನಭಿ ಮತ್ತು 5) ಶ್ರೀಮತಿ ಶಾರವ್ವ ನಿಂಗವ್ವ ಸುಂಕದ ರವರಿಗೆ ಈ-ಸ್ವತ್ತು ಯೋಜನೆಯಡಿಯಲ್ಲಿ ಕ್ರಮವಾಗಿ, ಸರ್ವೆ ನಂ.12/5, 12/6, 12/3 ಮತ್ತು 18/1 ರಲ್ಲಿಯ

ಜಮೀನುಗಳನ್ನು ಎನ್‌ಎ ಮಾಡದೇ ಎದುರುದಾರರು ಫ್ಲಾಟ್‌ಗಳನ್ನು ಮಾರ್ಪಡಿಸಿ ಅನೇಕ ಜನರಿಗೆ ಮಾರಾಟ ಮಾಡಿದ್ದು, ಇದರಿಂದ, ಸಕಾರಕ್ಕೆ ಬರಬೇಕಾಗಿದ್ದ ತೆರಿಗೆ ಹಣ ದುರ್ಬಳಕೆಯಾಗಿದೆ. ಆದ್ದರಿಂದ, ಎದುರುದಾರರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆಂದು, ಸಾಕ್ಷರತ್ ಮಿಷನ್ ಯೋಜನೆ ಅಡಿಯಲ್ಲಿ ಕಡಕೋಳ್ ಗ್ರಾಮದಲ್ಲಿ ಯಾವುದೇ ಕಲಿಕಾ ವಾತಾವರಣ ನಿರ್ಮಾಣ ಮಾಡದೇ ಖೋಟ್ಟಿ ದಾಖಲೆಗಳನ್ನು ತಯಾರಿಸಿ, ಸರ್ಕಾರದಿಂದ ಬಂದ ಅನುದಾನದ ಹಣವನ್ನು ಎದುರುದಾರರು ದುರುಪಯೋಗ ಪಡಿಸಿಕೊಂಡಿರುವುದಾಗಿ, ಆರೋಪಿಸಿ ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಶ್ರೀ ರಘೋತ್ತಮ ಕೃಷ್ಣರಾವ್ ದೇಶಪಾಂಡೆ, ಇವರು ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರನ್ವಯ ತನಿಖೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಎಂ.ಎಸ್.ಕುರ್ತಕೋಟಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಸವಣೂರು | 1 |
| 2 | ಶ್ರೀ ಮರಿಯಮ್ಮನವರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಡಕೋಳ ಗ್ರಾಮಪಂಚಾಯತಿ | 2 |
| 3 | ಶ್ರೀ ಡಿ.ಹೆಚ್.ಜಕಾತಿ, ತಾಲ್ಲೂಕು ವಯಸ್ಕರ ಮತ್ತು ಲೋಕ ಶಿಕ್ಷಣ ಸಮನ್ವಯಾಧಿಕಾರಿ. | 3 |

ಎದುರುದಾರರು ಸಲ್ಲಿಸಿದ್ದ ದೂರಿಗೆ ಎದುರುದಾರರುಗಳಿಂದ ಪಡೆದ ಆಕ್ಷೇಪಣೆ/ಉತ್ತರವನ್ನು, ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, 2010-11ನೇ ಸಾಲಿನಿಂದ 2014-15ನೇ ಸಾಲಿನ ಬಸವ ವಸತಿ ಯೋಜನೆ ಅಡಿಯ ಫಲಾನುಭವಿಗಳನ್ನು ಎರಡೆರಡು ಬಾರಿ ಆಯ್ಕೆ ಮಾಡಿ, ಅನುದಾನ ನೀಡಿರುವ ಬಗ್ಗೆ ತಿಳಿಸಿದ್ದಾರೆ. ಈ ಬಗ್ಗೆ ಜಿಪಿಎಸ್ ಆಧಾರಿತ ಫಲಾನುಭವಿಗಳ ಪಟ್ಟಿಯನ್ನು ಹಾಜರುಪಡಿಸಿದ್ದು, ಸದರಿ ಪಟ್ಟಿಯಲ್ಲಿ 1) ಶ್ರೀ ಯಲ್ಲಪ್ಪ ಭೀಮಪ್ಪ ಕೋಟಿ, 2) ಶ್ರೀಮತಿ ಯಲ್ಲವ್ವ ಭೀಮಪ್ಪ ಕೋಟಿ, 3) ಶ್ರೀಮತಿ ಮಂಜವ್ವ ಭೀಮಣ್ಣ ಬೆಳವಗಿ, 4) ಶ್ರೀಮತಿ ರೇಣವ್ವ ಶೇಖಪ್ಪ ಭಜಂತ್ರಿ, ಮತ್ತು 5) ಶ್ರೀಮತಿ ರೇಣವ್ವ ನಾಗಪ್ಪ ಭಜಂತ್ರಿ ರವರ ಹೆಸರುಗಳು ಎರಡೆರಡು ಬಾರಿ ನಮೂದಾಗಿದ್ದು, ಅನುದಾನ ಪಡೆದಿರುವುದು ಕಂಡು ಬಂದಿದೆ. ಈ ರೀತಿ ಫಲಾನುಭವಿಗಳ

ಆಯ್ಕೆ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿಗೆ ಎರಡೆರಡು ಬಾರಿ ಆಯ್ಕೆ ಮಾಡಿ ಅನುದಾನ ಬಿಡುಗಡೆ ಮಾಡಿರುವುದು 2ನೇ ಎದುರುದಾರರ ಕರ್ತವ್ಯಲೋಪ ಆಗಿದೆ. ವಸತಿಯೋಜನೆಯಡಿ ಫಲಾನುಭವಿಗಳ ಆಯ್ಕೆ ಪಟ್ಟಿ ತಯಾರಿಸುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರ ಕರ್ತವ್ಯವಾಗಿದೆ. ನಿವೇಶ ಹಂಚಿಕೆಗೆ ಸಂಬಂಧಿಸಿದಂತೆ, ಇ-ಸ್ವತ್ತು ಯೋಜನೆಯಡಿ ರವರಿಗೆ ಈ-ಸ್ವತ್ತು ಯೋಜನೆಯಡಿ ಸರ್ವೇ ನಂ.12/5, 12/6, 12/3 ಮತ್ತು 18/1 ರಲ್ಲಿಯ ಜಮೀನುಗಳಲ್ಲಿ ಎನ್‌ಎ ಮಾಡದೇ ಇ-ಸ್ವತ್ತು ಯೋಜನೆಯಡಿ 1) ಶ್ರೀ ಶಿವಾನಂದ ಬಸವಣ್ಣೆಪ್ಪ ಕೋಳಿವಾಡ, 2) ಶ್ರೀ ಪಂಚಾಕ್ಷರಪ್ಪ ಬಸಲಿಂಗಪ್ಪ ಗುಜರಿ, 3) ಶ್ರೀ ಚನ್ನಪ್ಪ ಚನ್ನಬಸಪ್ಪ ದೇವಗಿರಿ, 4) ಶ್ರೀಮತಿ ಮಲ್ಲವ್ವ ಈರಣ್ಣ ಹಸನಭಿ ಮತ್ತು 5) ಶ್ರೀಮತಿ ಶಾರವ್ವ ನಿಂಗವ್ವ ಸುಂಕದ, ರವರಿಗೆ ಮಾರಾಟ ಮಾಡಿ ಸರ್ಕಾರಕ್ಕೆ ನಷ್ಟ ಪಡಿಸಿರುವುದು ಸಹ ಕಂಡು ಬಂದಿದೆ. ಈ ಬಗ್ಗೆ ದೂರುದಾರರು ಮತ್ತು ಆ ಗ್ರಾಮದ ಸಾರ್ವಜನಿಕರು 1ನೇ ಎದುರುದಾರರಿಗೆ ಹಲವಾರು ಬಾರಿ ದೂರು ನೀಡಿದ್ದು, 1ನೇ ಎದುರುದಾರರು 2 ಎದುರುದಾರರಿಗೆ ಇ-ಸ್ವತ್ತು ತಂತ್ರಾಂಶವನ್ನು ರದ್ದುಪಡಿಸುವ ಬಗ್ಗೆ ಮಾತ್ರ ನಿರ್ದೇಶನವನ್ನು ನೀಡಿದ್ದಾರೆ. ಗ್ರಾಮ ಪಂಚಾಯತಿ ಗುಮಾಸ್ತರಾದ ಶ್ರೀ ಎಸ್.ಎಂ.ಸವಣೂರು ಎಂಬುವವರು ಕರ ವಸೂಲಿ ಹಣವನ್ನು ದುಪಯೋಗ ಪಡಿಸಿಕೊಂಡಿರುವ ವಿಚಾರ 1 ಮತ್ತು 2ನೇ ಎದುರುದಾರರಿಗೆ ಗೊತ್ತಿದ್ದರೂ ಸಹ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪವೆಸಗಿದ್ದಾರೆ. ಈ ಮೇಲೆ ಹೇಳಲಾದ ಸರ್ವೇ ನಂಬರ್ ಜಮೀನುಗಳನ್ನು ಎನ್‌ಎ ಮಾಡದೇ ನಿವೇಶನಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದು 1 ಮತ್ತು 2ನೇ ಎದುರುದಾರರ ಕರ್ತವ್ಯ ಲೋಪವಾಗಿದೆ. ಅದೇ ರೀತಿ, ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯನ್ನು ಎರಡೆರಡು ಬಾರಿ ಆಯ್ಕೆ ಮಾಡಿ ಅನುದಾನ ನೀಡಿರುವುದು 2ನೇ ಎದುರುದಾರರ ಕರ್ತವ್ಯ ಲೋಪವಾಗಿರುತ್ತದೆವಾದುದರಿಂದ, ಹಾಗೂ ಇವರುಗಳು ನೀಡಿರುವ ಆಕ್ಷೇಪಣೆಗಳು, ಇವರುಗಳ ವಿರುದ್ಧ ನಡವಳಿಗಳನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರವಾಗಿರುವುದಿಲ್ಲವಾದುದರಿಂದ, ಹಾಗೂ ಎದುರುದಾರರು 1 ಮತ್ತು 2 ರವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ

ನಿಯಮ 14(ಎ) ರನ್ವಯ ವಹಿಸಿಕೊಡುವಂತೆ, ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ಅಪರ ನಿಬಂಧಕರು, ರವರು ಕೋರಿರುತ್ತಾರೆ.

3ನೇ ಎದುರುದಾರರಾದ ಶ್ರೀ ಬಿ.ಹೆಚ್.ಜಕಾತಿ, ಇವರು ಕಾರ್ಯಕ್ರಮ ನಿರ್ವಹಣೆ ಮಾಡುವ ಕೆಲಸ ಮಾತ್ರವಾಗಿರುವುದರಿಂದ, ಇವರು ಕರ್ತವ್ಯಲೋಪ ಎಸಗಿಲ್ಲವಾದುದರಿಂದ, ಇವರ ವಿರುದ್ಧ ನಡವಳಿಗಳನ್ನು ಕೈಬಿಡಲಾಗಿರುತ್ತದೆಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ತಿಳಿಸಲಾಗಿರುತ್ತದೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಶಿಫಾರಸ್ಸು ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 1 ಮತ್ತು 2 ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದುದರಿಂದ, ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಶ್ರೀ ಎಂ.ಎಸ್.ಕುರ್ತಕೋಟಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಸವಣೂರು, ಹಾಗೂ ಶ್ರೀ ಮರಿಯಮ್ಮನವರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಡಕೋಳ, ಗ್ರಾಮ ಪಂಚಾಯತಿ, ಇವರುಗಳ ವಿರುದ್ಧದ ಆರೋಪಗಳ ಸಂಬಂಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 376 ವಿಸೇಬಿ 2016 ಬೆಂಗಳೂರು ದಿನಾಂಕ: 18-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಶ್ರೀ ಎಂ.ಎಸ್.ಕುರ್ತಕೋಟಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಸವಣೂರು, ಹಾಗೂ ಶ್ರೀ ಮರಿಯಮ್ಮನವರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಡಕೋಳ, ಗ್ರಾಮ ಪಂಚಾಯತಿ, ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ

ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

18/01/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಹಾವೇರಿ
4) ನಿರ್ದೇಶಕರು(ಪಂಚಾಯತ್ ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01
4) ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿ ಮಾಹಿತಿಗಾಗಿ:

5) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
6) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
7) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.